<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.</u>

<u>ಸಿಸಿ ನಂಃ **45/2014**</u>

| | | | |
|---|---|---|---|
| ಹೆಸರು | ಃ . ಸುವರ್ಣ | ಸಿ.ಡಬ್ಲ್ಯೂ | ಃ 5 |
| ಗಂಡನ ಹೆಸರು | ಃ ಪ್ರಸನ್ನ | ಪಿ.ಡಬ್ಲ್ಯೂ | ಃ 5 |
| ವಯಸ್ಸು | ಃ 34 ವರ್ಷ | | |
| ಉದ್ಯೋಗ | ಃ ಕಂಡಕ್ಟರ್, ಕೆ.ಎಸ್.ಆರ್.ಟಿ.1 ಸಿ | | |
| ವಾಸ ಸ್ಥಳ | ಃ ಬೆಂಗಳೂರು | | |

ಸಾಕ್ಷಿಗೆ ದಿನಾಂಕಃ 25**.09.2018** ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ .</u>

2006 ರಿಂದ ಕೆಎಸ್ ಆರ್ ಟಿ ಸಿಯ ಬೆಂಗಳೂರು ಕೆಂಗೇರಿಯಲ್ಲಿರುವ 6 ನೇ ಘಟಕದಲ್ಲಿ ನಿರ್ವಾಹಕಿಯಾಗಿ 2014 ನೇ ಇಸವಿಯವರೆಗೆ ಕೆಲಸ ನಿರ್ವಹಿಸುತ್ತಿದ್ದೆ. ಪ್ರಸ್ತುತ 2 ನೇ ಘಟಕದಲ್ಲಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಇಲಾಖೆ ವತಿಯಿಂದ ನನಗೆ ಉಚಿತ ಪ್ರಯಾಣ ಮಾಡಲು ಪಾಸ್ ನೀಡಿದ್ದರು. ಅದರ ಸಂಖ್ಯೆ 01426. ಮೂಲ ಪಾಸ್ ನ್ನು ಭದ್ರವಾಗಿಡುವ ದೃಷ್ಟಿಯಿಂದ ಅದರ ಯಥಾ ಸ್ಥಿತಿಯ ಕಲರ್ ಜೆರಾಕ್ಸ್ ನ್ನು ಮಾಡಿಸಿ ಲ್ಯಾಮಿನೇಷನ್ ಮಾಡಿಸಿಕೊಂಡು ಪ್ರತೀದಿನ ಪ್ರಯಾಣದ ಸಂಧರ್ಭದಲ್ಲಿ ನನ್ನ ಬಳಿ ಇಟ್ಟುಕೊಳ್ಳುತ್ತಿದ್ದೆ. ಮೂಲ ಪಾಸ್ ನ್ನು ಮನೆಯಲ್ಲಿ ಇಟ್ಟಿದ್ದೆ. ತದನಂತರ ಒಂದು ದಿನ ನಾನು ಬೆಂಗಳೂರು ಮೈಸೂರು ರೂಟ್ ನಲ್ಲಿ ನಿರ್ವಾಹಕಿಯಾಗಿ ಕೆಲಸ ಮಾಡುತ್ತಿದ್ದಾಗ ನನ್ನ ಬಸ್ಸನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರ ಪೈಕಿ ಒಬ್ಬ ವ್ಯಕ್ತಿ ಖಾಕಿ ಯುನಿಫಾರಂ ಮತ್ತು ಕೆಎಸ್.ಆರ್.ಟಿ.ಸಿ ಬ್ಯಾಡ್ಜು ಧರಿಸಿಕೊಂಡು ಪ್ರಯಾಣಿಸುತ್ತಿದ್ದ. ಎಲ್ಲಿಗೆ ಎಂದು ಕೇಳಿದಾಗ ನಾನು ಮೈಸೂರಿಗೆ ಪ್ರಯಾಣಿಸುತ್ತಿದ್ದೇನೆ ಎಂದು ತಿಳಿಸಿದ. ಟಿಕೇಟ್ ತೆಗೆದುಕೊಳ್ಳಿ ಎಂದು ಆತನನ್ನು ಕೇಳಿದೆ. ಅದಕ್ಕೆ ಉತ್ತರವಾಗಿ ಸದರೀ ವ್ಯಕ್ತಿ ನಾನೂ ಸಹ ಹೊಸದಾಗಿ ಕೆಎಸ್.ಆರ್.ಟಿ. ಸಿ ಕಂಡಕ್ಟರ್ ಆಗಿ ನೇಮಕ ಆಗಿದ್ದೀನಿ. ಆದರೆ ನನಗೆ ಇನ್ನೂ ಉಚಿತ ಪ್ರಯಾಣದ ಪಾಸ್ ನೀಡಿಲ್ಲ ಎಂದು ಹೇಳಿದ ಆತನು, ನಿಮಗೆ ಪಾಸ್ ಕೊಟ್ಟಿದ್ದರೇ ಹೇಗಿರುತ್ತದೆ ಕೊಡಿ ನೋಡೋಣ ಎಂದು ಕೇಳಿದ. ನಾನು ಲ್ಯಾಮಿನೇಷನ್ ಮಾಡಿ ಇಟ್ಟುಕೊಂಡಿದ್ದ ನನ್ನ ಪಾಸನ್ನು ಅವನ ಕೈಗೆ ಕೊಟ್ಟು ನೋಡುತ್ತಿರಿ ನಾನು ಪ್ರಯಾಣಿಕರಿಗೆ ಟಿಕೇಟ್ ನೀಡಿ ಬರುತ್ತೇನೆ ಎಂದು ಹೇಳಿ ಕರ್ತವ್ಯ ನಿರತಳಾದೆ. ನನ್ನ ಬಸ್ ಚನ್ನಪಟ್ಟಣದಿಂದ ಮೈಸೂರು ಕಡೆ ಹೊಟಿದ್ದಾಗ

ಪಾಸ್ ನ್ನು ನೋಡಲು ಆತನಿಗೆ ನೀಡಿದೆ. ಬಸ್ ಮದ್ದೂರು ಸ್ಟಾಪ್ ಗೆ ಬಂದಾಗ ಆ ವ್ಯಕ್ತಿಯನ್ನು ನೋಡಿದಾಗ ಅವನು ಬಸ್ ನಲ್ಲಿ ಇರಲಿಲ್ಲ. ನನ್ನ ಲ್ಯಾಮಿನೇಟೆಡ್ ಬಸ್ ಪಾಸ್ ಸಮೇತ ಹೊರಟುಹೋಗಿದ್ದ. ಆ ವ್ಯಕ್ತಿ ಬಗ್ಗೆ ತಿಳಿದುಕೊಳ್ಳಲು ಮತ್ತು ಅವನು ತೆಗೆದುಕೊಂಡು ಹೋಗಿದ್ದ ಪಾಸ್ ನ್ನು ವಾಪಸ್ಸು ಪಡೆಯಲು ಸಾಕಷ್ಟು ಪ್ರಯತ್ನ ಮಾಡಿದರೂ ಏನೂ ಪ್ರಯೋಜನ ಆಗಲಿಲ್ಲ. ನನ್ನ ಪಾಸಿನ ಅವಧಿ ದಿನಾಂಕಃ 31.12.2012 ಕ್ಕೆ ಮುಕ್ತಾಯಗೊಂಡಿತು. ನಂತರ ನನ್ನ ಮೂಲ ಪಾಸ್ ನ್ನು ಇಲಾಖೆಗೆ ಹಿಂತಿರುಗಿಸಿ ಹೊಸ ಪಾಸ್ ನ್ನು ಪಡೆದುಕೊಂಡೆ. ಸ್ವಲ್ಪ ಸಮಯದ ನಂತರ ನನ್ನ ಪಾಸ್ ನ್ನು ತೆಗೆದುಕೊಂಡು ಹೊರಟುಹೋಗಿದ್ದ ವ್ಯಕ್ತಿ ಪಾಸ್ ನಲ್ಲಿದ್ದ ನನ್ನ ಫೋಟೋವನ್ನು ಮತ್ತು ಹೆಸರನ್ನು ಕೆರೆದು ತನ್ನ ಫೋಟೋ ಮತ್ತು ಹೆಸರನ್ನು ಹಾಕಿಕೊಂಡು ಪ್ರಯಾಣಿಸುತ್ತಿದ್ದ ಸಂಧರ್ಭದಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆಂದು ಮತ್ತು ಆತನ ಹೆಸರು ಲೋಕೇಶ್ ಎಂದು ಗೊತ್ತಾಯಿತು. ಆ ವ್ಯಕ್ತಿಯನ್ನು ನೋಡಿದರೆ ಗುರುತಿಸಬಲ್ಲೆ. ನನ್ನ ಫೋಟೋ ಮತ್ತು ಹೆಸರನ್ನು ಕೆರೆದು ಆ ಜಾಗದಲ್ಲಿ ಆ ವ್ಯಕ್ತಿ ಫೋಟೋ ಮತ್ತು ಹೆಸರು ಬರೆದುಕೊಂಡಿರುವ ಪಾಸ್ ನ್ನು ನಿ.ಪಿ. 3 ಎಂದು ಗುರುತಿಸಲಾಗಿರುತ್ತದೆ.

**ಆರೋಪಿ ಪರ ವಕೀಲರು ಹಾಜರಿಲ್ಲದ ಕಾರಣ, ಸಾಕ್ಷಿಯ ಪಾಟೀ ಸವಾಲನ್ನು ದಿನಾಂಕಃ 16.10.2018 ಕ್ಕೆ ಮುಂದೂಡಲಾಯಿತು.**

**ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇಲ್ಲ.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.